# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **329** |
| **ಸದಸ್ಯರ ಹೆಸರು** | : | **ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **15.12.2021** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಂದಾಯ ಸಚಿವರು** |

| ಪ್ರಶ್ನೆ | ಉತ್ತರ |
|---|---|
| **(ಅ)** ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಮಳೆ ಹಾನಿಗೊಳಗಾದ ಜಿಲ್ಲೆಗಳು ಮತ್ತು ತಾಲ್ಲೂಕುಗಳು ಯಾವುವು; ಮಳೆ ಹಾನಿಯಿಂದ ಉಂಟಾದ ನಷ್ಟದ ಅಂದಾಜು ಎಷ್ಟು: (ಸಂಪೂರ್ಣ ವಿವರ ನೀಡುವುದು) | ಪ್ರಸಕ್ತ ಸಾಲಿನ ಜುಲೈ-ಆಗಸ್ಟ್ ಮಾಹೆಯಲ್ಲಿ ಉಂಟಾದ ಪ್ರವಾಹದಿಂದ ಹಾನಿಗೊಳಗಾದ 104 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. (ತಾಲ್ಲೂಕುವಾರು ಪಟ್ಟಿ ಅನುಬಂಧದಲ್ಲಿ ಒದಗಿಸಿದೆ).<br><br>ಮುಂದುವರೆದು, ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ರಾಜ್ಯಾದ್ಯಂತ ವ್ಯಾಪಕ ಮಳೆಯಾಗಿದ್ದು, ಅತಿವೃಷ್ಟಿ ಇತ್ಯಾದಿ ಪ್ರಕೃತಿ ವಿಕೋಪ ಉಂಟಾದ ಸಂದರ್ಭದಲ್ಲಿ ಸರ್ಕಾರದಿಂದ ಪ್ರತ್ಯೇಕವಾಗಿ ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡುವುದಿಲ್ಲವೆಂದು ದಿನಾಂಕ:23.11.2021ರ ಸರ್ಕಾರಿ ಆದೇಶದಲ್ಲಿ ಸ್ಪಷ್ಟೀಕರಿಸಿ ಮಾರ್ಗಸೂಚಿಯನ್ವಯ ಪ್ರವಾಹದಿಂದ ಉಂಟಾದ ಹಾನಿಯ ಪರಿಹಾರವನ್ನು ಪರಿಷ್ಕೃತ ದರದಲ್ಲಿ ಪಾವತಿಸಲು ಆದೇಶಿಸಲಾಗಿದೆ. |
| **(ಆ)** ಮಳೆಹಾನಿಯಿಂದ ಎಷ್ಟು ಜನರು ನಿರಾಶ್ರಿತರಾಗಿದ್ದಾರೆ, ನಿರಾಶ್ರಿತರ ಪುನರ್ ವಸತಿ ನಿರ್ಮಾಣಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಬಿಡುಗಡೆ ಮಾಡಿದ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)<br><br>**(ಇ)** ಎಸ್.ಡಿ.ಆರ್.ಎಫ್ ಯೋಜನೆಯಡಿ ಬೆಳೆ ಹಾಗೂ ಮನೆಗಳಿಗೆ ಯಾವ ಮಾನದಂಡ ಆಧರಿಸಿ ಪರಿಹಾರ ನೀಡಲಾಗುವುದು; | ರಾಜ್ಯಾದ್ಯಂತ ಮಳೆಯಿಂದ 39,975 ಮನೆ ಹಾನಿಯಾಗಿದೆ.<br><br>ಮನೆಹಾನಿಯಾದ ಸಂತ್ರಸ್ಥರಿಗೆ ಸ್ವತಃ ಮನೆ ನಿರ್ಮಾಣದ ಹಂತಕ್ಕನುಗುಣವಾಗಿ RGRHCL ತಂತ್ರಾಂಶದ ಮೂಲಕ ಈ ಕೆಳಕಂಡಂತೆ ಪರಿಹಾರವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.<br><br>ಸಂಪೂರ್ಣವಾಗಿ ಮನೆ ಹಾನಿಯಾದ ಸಂತ್ರಸ್ಥರಿಗೆ ಮನೆ ನಿರ್ಮಾಣದ ಹಂತದನುಸಾರ ಮೊದಲ ಕಂತಿನಲ್ಲಿ ರೂ.1.00 ಲಕ್ಷ, ತಳಪಾಯ ಹಂತದಲ್ಲಿ ರೂ.1.00 ಲಕ್ಷ, ಲಿಂಟಲ್ ಹಂತದಲ್ಲಿ ರೂ.1.00 ಲಕ್ಷ, ಚಾವಣಿ ಹಂತದಲ್ಲಿ ರೂ.1.00 ಲಕ್ಷ ಹಾಗೂ ಪೂರ್ಣಗೊಂಡ ನಂತರ ರೂ.1.00 ಲಕ್ಷ ಸೇರಿ ಒಟ್ಟಾರೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತದೆ.<br><br>ತೀವ್ರ ಮನೆ ಹಾನಿಯಾದ ಸಂತ್ರಸ್ಥರಿಗೆ ಮನೆ ನಿರ್ಮಾಣದ ಹಂತದನುಸಾರ 3 ಕಂತುಗಳಲ್ಲಿ ತಲಾ ರೂ.1.00 ಲಕ್ಷದಂತೆ ಒಟ್ಟಾರೆ ರೂ.3.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತದೆ. |

ಭಾಗಶಃ ಮನೆ ಹಾನಿಯಾದ ಸಂತ್ರಸ್ಥರಿಗೆ ಒಂದೇ ಕಂತಿನಲ್ಲಿ ರೂ.50,000/-ಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಮನೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕಿಂತ ಈ ಕೆಳಕಂಡ ಪರಿಷ್ಕೃತ ದರದಲ್ಲಿ ಪರಿಹಾರ ಪಾವತಿಸಲಾಗುತ್ತದೆ.

| | ಮಾರ್ಗಸೂಚಿ ದರ | ಹೆಚ್ಚುವರಿ ದರ | ಒಟ್ಟು |
|---|---|---|---|
| ಪೂರ್ಣ ಮನೆ ಹಾನಿ | ರೂ.95,100/- | ರೂ.4,04,900 | ರೂ.5.00 ಲಕ್ಷ |
| ತೀವ್ರ ಮನೆ ಹಾನಿ | ರೂ.95,100/- | ರೂ.2,049,00 | ರೂ.3.00 ಲಕ್ಷ |
| ಭಾಗಶಃ ಮನೆ ಹಾನಿ | ರೂ.5,200/- | ರೂ.44,800 | ರೂ.50,000/- |

ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲಾಗುತ್ತಿದೆ.

ಮನೆ ಹಾನಿ ಪರಿಹಾರ ಪಾವತಿಗಾಗಿ ರೂ.33286.71 ಲಕ್ಷಗಳನ್ನು ದಿನಾಂಕ:23-11-2021ರ ಸರ್ಕಾರಿ ಆದೇಶನ್ವಯ ಬಿಡುಗಡೆಗೊಳಿಸಲಾಗಿದೆ. ಇದರ ಪೈಕಿ SDRF ಮಾರ್ಗಸೂಚಿಯನುಸಾರ ರೂ.13222.58ಲಕ್ಷಗಳಾಗುತ್ತದೆ.

ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರಕೃತಿ ವಿಕೋಪದಿಂದ ಉಂಟಾದ ಬೆಳೆ ಹಾನಿಗೆ, ಇನ್‌ಪುಟ್ ಸಬ್ಸಿಡಿಯನ್ನು ಪ್ರತಿ ಫಲಾನಿಭವಿಗಳಿಗೆ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಈ ಕೆಳಕಂಡ ದರದಲ್ಲಿ ಪಾವತಿಸಲಾಗುತ್ತದೆ:

| | |
|---|---|
| ಮಳೆಯಾಶ್ರಿತ | ರೂ.6,800/- |
| ನೀರಾವರಿ | ರೂ.13,500/- |
| ಬಹುವಾರ್ಷಿಕ | ರೂ.18,000/- |

ಬೆಳೆ ಹಾನಿ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಿದ ತಕ್ಷಣ ರೈತರ ಬ್ಯಾಂಕ್ ಖಾತೆಗೆ ಇನ್‌ಪುಟ್ ಸಬ್ಸಿಡಿ ಹಣ ಜಮೆಯಾಗುತ್ತದೆ. ಈ ವರೆಗೂ 6.60 ಲಕ್ಷ ರೈತರ ಬ್ಯಾಂಕ್ ಖಾತೆಗೆ ರೂ.443.16 ಕೋಟಿ ಜಮೆಯಾಗಿದೆ.

ಕಂಇ 536 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-321ಕ್ಕೆ ಅನುಬಂಧ

2021 ನೇ ಸಾಲಿನ ಪ್ರವಾಹ ಪೀಡಿತ ತಾಲ್ಲೂಕುಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | ಪ್ರವಾಹ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕು |
|---|---|---|
| 1 | ದಾವಣಗೆರೆ | 1. ಹರಿಹರ 2. ಹೊನ್ನಾಳಿ 3. ನ್ಯಾಮತಿ 4. ಚನ್ನಗಿರಿ 5. ದಾವಣಗೆರೆ |
| 2 | ರಾಯಚೂರು | 6. ದೇವದುರ್ಗ 7. ಲಿಂಗಸುಗೂರು 8. ರಾಯಚೂರು |
| 3 | ಬೆಳಗಾವಿ | 9. ಅಥಣಿ 10. ಬೈಲಹೊಂಗಲ 11. ಚಿಕ್ಕೋಡಿ 12. ಗೋಕಾಕ್ 13. ಹುಕ್ಕೇರಿ 14. ಖಾನಾಪುರ 15. ರಾಯಭಾಗ 16. ರಾಮದುರ್ಗ 17. ಸವದತ್ತಿ 18. ಕಿತ್ತೂರು 19. ನಿಪ್ಪಾಣಿ 20. ಕಾಗವಾಡ 21. ಮೂಡಲಗಿ 22. ಬೆಳಗಾವಿ |
| 4 | ಬಾಗಲಕೋಟೆ | 23. ಬಾದಾಮಿ 24. ಬಾಗಲಕೋಟೆ 25. ಬೀಳಗಿ 26. ಹುನಗುಂಗ 27. ಜಮಖಂಡಿ 28. ಮುಧೋಳ 29. ಗುಳೇದಗುಡ್ಡ 30. ಇಳಕಲ್ 31. ರಬಕವಿ ಬನಹಟ್ಟಿ |
| 5 | ಗದಗ | 32. ನರಗುಂದ 33. ರೋಣ 34. ಲಕ್ಷ್ಮೇಶ |
| 6 | ಹಾವೇರಿ | 35. ಬ್ಯಾಡಗಿ 36. ಹಾನಗಲ್ 37. ಹಾವೇರಿ 38. ಹಿರೇಕೆರೂರು 39. ರಾಣೆಬೆನ್ನೂರು 40. ಸವಣೂರು 41. ಶಿಗ್ಗಾಂವ 42. ರಟ್ಟಿಹಳ್ಳಿ |
| 7 | ಧಾರವಾಡ | 43. ಧಾರವಾಡ 44. ಕಲಘಟಗಿ 45. ಕುಂದಗೋಳ 46. ನವಲಗುಂದ 47. ಅಳ್ನಾವರ 48. ಅಣ್ಣಿಗೇರಿ 49. ಹುಬ್ಬಳಿ ನಗರ 50. ಹುಬ್ಬಳ್ಳಿ ತಾಲ್ಲೂಕು |
| 8 | ಶಿವಮೊಗ್ಗ | 51. ಸಾಗರ 52. ಶಿಕಾರಿಪುರ 53. ಶಿವಮೊಗ್ಗ 54. ಸೊರಬ 55. ಭದ್ರಾವತಿ 56. ತೀರ್ಥಹಳ್ಳಿ 57. ಹೊಸನಗರ |
| 9 | ಹಾಸನ | 58. ಸಕಲೇಶಪುರ 59. ಆಲೂರು |
| 10 | ಚಿಕ್ಕಮಗಳೂರು | 60. ನರಸಿಂಹರಾಜಪುರ 61. ಚಿಕ್ಕಮಗಳೂರು 62. ಕಡೂರು 63. ತರೀಕೆರೆ 64. ಮೂಡಿಗೆರೆ 65. ಕೊಪ್ಪ 66. ಶೃಂಗೇರಿ |
| 11 | ಕೊಡಗು | 67. ಮಡಿಕೇರಿ |
| 12 | ಉತ್ತರ ಕನ್ನಡ | 68. ಅಂಕೋಲ 69. ಹಳಿಯಾಳ 70. ಕಾರವಾರ 71. ಕುಮಟ 72. ಸಿದ್ದಾಪುರ 73. ಶಿರಸಿ 74. ಯಲ್ಲಾಪುರ 75. ದಾಂಡೇಲಿ 76. ಸೂಪ 77. ಮುಂಡಗೋಡು |
| 13 | ಯಾದಗಿರಿ | 78. ಶಹಾಪುರ 79. ಶೋರಾಪುರ 80. ವಡಗೇರಾ 81. ಹುಣಸಗಿ |
| 14 | ವಿಜಯಪುರ | 82. ಬಬಲೇಶ್ವರ 83. ನಡಗುಂಡಿ 84. ಕೊಲ್ಹಾರ 85. ಮುದ್ದೇಬಿಹಾಳ |
| 15 | ವಿಜಯನಗರ | 86. ಹರಪನಹಳ್ಳಿ |
| 16 | ಕಲಬುರ್ಗಿ | 87. ಕಾಳಗಿ 88. ಚಿಂಚೋಳಿ 89. ಆಳಂದ 90. ಶಹಬಾದ್ 91. ಸೇಡಂ 92. ಕಲಬುರ್ಗಿ 93. ಚಿತ್ತಾಪುರ 94. ಅಫಜಲ್ ಪುರ 95. ಜೇವರ್ಗಿ 96. ಯಡ್ರಾಮಿ |
| 17 | ಬೀದರ್ | 97. ಚಿತ್ರಗುಪ್ಪ 98. ಹುಮನಬಾದ್ 99. ಬಾಲ್ಕಿ, 100 ಔರಾದ್, 101. ಬೀದರ್, 102. ಬಸವಕಲ್ಯಾಣ, 103.ಕಮಲಾನಗರ, 104.ಹುಲ್ಸೂರ್. |